**Code No. 16 Y**

**ವಾಣಿಜ್ಯ ಪರೀಕ್ಷೆಗಳು**

# ಕನ್ನಡ ಶೀಘ್ರಲಿಪಿ — ಪ್ರವೀಣ ದರ್ಜೆ — ದ್ವಿತೀಯ ಪತ್ರಿಕೆ
# (ವಿಸ್ತರಿಸುವಿಕೆ)

ಜನವರಿ, 2019

ವೇಳೆ { ಉಕ್ತಲೇಖನ : 5 ನಿಮಿಷಗಳು
ವಿಸ್ತರಣೆ : 3 ಗಂಟೆಗಳು

ಪರಮಾವಧಿ ಅಂಕಗಳು : 100

***ಓದುಗರಿಗೆ ಸೂಚನೆಗಳು :***

1) ಈ ಕೆಳಗೆ ಕೊಟ್ಟಿರುವ ವಿಷಯವನ್ನು ಒಂದು ನಿಮಿಷಕ್ಕೆ ಮುನ್ನೂರು (300) ಅಕ್ಷರಗಳ ವೇಗದಲ್ಲಿ ಪ್ರಶ್ನೆ ಪತ್ರಿಕೆಯಲ್ಲಿ ಸೂಚಿಸಿದ ರೀತಿಯಲ್ಲೇ ಓದತಕ್ಕದ್ದು.
2) ಉಕ್ತಲೇಖನ ಮುಗಿದ ನಂತರ ಅಭ್ಯರ್ಥಿಗಳಿಗೆ ಅವರ ಶೀಘ್ರಲಿಪಿಯ ಟಿಪ್ಪಣಿಗಳನ್ನು ಅವಶ್ಯವಾಗಿರುವಂತೆ ಸರಿಯಾದ ನಮೂನೆಯಲ್ಲಿ ಸೂಕ್ತವಾಗಿ ವಿಸ್ತರಿಸಬೇಕೆಂದು ಸೂಚಿಸತಕ್ಕದ್ದು.
3) ಪ್ರಶ್ನಾಂಕಗಳು ವೇಗ ವಿಷಯದ ಭಾಗವಾಗಿರುವುದರಿಂದ ಅವುಗಳನ್ನು ಸ್ವಲ್ಪ ***ಎತ್ತರಿಸಿದ ಧ್ವನಿಯಲ್ಲಿ*** ಓದತಕ್ಕದ್ದು.
4) ಪ್ರತಿಯೊಂದು ಪ್ರಶ್ನೆಗೂ ನಿಗದಿಯಾಗಿರತಕ್ಕ ಅಂಕಗಳನ್ನು ಪ್ರಶ್ನೆಗಳ ಉಕ್ತಲೇಖನ ಕೊಡುವಾಗ ಓದಕೂಡದು. ಉಕ್ತಲೇಖನ ಮುಗಿದ ನಂತರ ಈ ಅಂಶಗಳನ್ನು ಅಭ್ಯರ್ಥಿಗಳಿಗೆ ತಿಳಿಸತಕ್ಕದ್ದು.

---

***ಪ್ರಶ್ನೆ ಒಂದು :*** ಕಾರ್ಯಪಾಲಕ ಇಂಜಿನಿಯರ್, ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ, ನಂ. 4 ಎತ್ತಿನಹೊಳೆ ಯೋಜನಾ ವಿಭಾಗ, ಅರಸೀಕೆರೆ ಇವರ ಕಚೇರಿಯಲ್ಲಿ ತುಂಬಾ ದಿವಸಗಳಿಂದ ನಿಂತಿರುವ ಟಾಟಾ ಸುಮೋ
$\frac{1}{4}$ ವಾಹನ ಮತ್ತು/ ಬಿಡಿ ಭಾಗಗಳು ಯಾವ ಸ್ಥಿತಿಯಲ್ಲಿದೆಯೋ ಆ ಸ್ಥಿತಿಯಲ್ಲಿಯೇ ಬಹಿರಂಗ ಹರಾಜು ಮಾಡಲಾಗುವುದು. ಅರ್ಜಿಗಳನ್ನು ಕಚೇರಿ ವೇಳೆಯಲ್ಲಿ ಪಡೆಯಬಹುದು. ಹರಾಜು ದಿನಾಂಕ ಆರನೇ ಮೇ ಎರಡು
ಸಾವಿರದ ಹದಿನೆಂಟು. ವಿಲೇವಾ/ರಿಯಾಗುವ $\frac{1}{2}$
ಸರಕುಗಳನ್ನು ಕಚೇರಿಯ ವೇಳೆಯಲ್ಲಿ ನೋಡಬಹುದು. ಜಯಶೀಲರಾದ ಹರಾಜುದಾರರು ಲಿಖಿತ ಅನುಮೋದನೆ ಬಂದ ಎಂಟು ದಿನಗಳೊಳಗೆ ಹಣವನ್ನು ತೆರಿಗೆ ಸಹಿತ ಪಾವತಿ ಮಾಡಿ ಹರಾಜಿನ ಸರಕು/ $\frac{3}{4}$



[ Turn over

ಸರಂಜಾಮುಗಳನ್ನು ತಮ್ಮ ಖರ್ಚಿನಲ್ಲಿ
ಸಾಗಿಸುವುದು. ತಪ್ಪಿದಲ್ಲಿ ಠೇವಣಿ ಹಣ
ಮುಟ್ಟುಗೋಲು ಹಾಕಿಕೊಳ್ಳಲಾಗುವುದು.
ಇತರರ ಮುಂಗಡ ಠೇವಣಿ ಹಣ ಹರಾಜಿನ
ನಂತರ ಹಿಂದಿರುಗಿಸಲಾಗುವುದು. ಹರಾಜು
1 ಪ್ರಕ್ರಿಯೆಯನ್ನುX ಒಪ್ಪಿಕೊಳ್ಳುವ ಅಥವಾ
ತಿರಸ್ಕರಿಸುವ ಹಕ್ಕನ್ನು ಈ ಕೆಳಗೆ ಸಹಿ
ಮಾಡಿರುವವರು ಕಾಯ್ದಿರಿಸಿರುತ್ತಾರೆ.

**ಹರಾಜು ಪ್ರಕಟಣೆ ತಯಾರಿ.** (ಅಂಕಗಳು : 20)

***ಪ್ರಶ್ನೆ ಎರಡು :*** ಮಂಡ್ಯ ಲೋಕಸಭಾ ಉಪ
ಚುನಾವಣೆ ಮೂರನೇ ನವೆಂಬರ್ ಎರಡು
$\frac{1}{4}$ ಸಾ/ವಿರದ ಹದಿನೆಂಟು ಪಕ್ಷ : ಭಾರತೀಯ
ಜನತಾ ಪಕ್ಷ ಅಭ್ಯರ್ಥಿ : ಶ್ರೀ ಶಿವಣ್ಣ,
ಸಮಯ : ಬೆಳಿಗ್ಗೆ ಏಳರಿಂದ ಸಂಜೆ ಐದು. ಕಳೆದ
ಸಾಲಿನಲ್ಲಿ ವಿಧಾನಸಭಾ ಸದಸ್ಯನಾಗಿದ್ದಾಗ
ಕ್ಷೇತ್ರದಲ್ಲಿ ಕುಡಿಯುವ ನೀರು, ವಿದ್ಯುಚ್ಛಕ್ತಿ
$\frac{1}{2}$ ಸಮಸ್ಯೆ/ ರಸ್ತೆ ಸೌಲಭ್ಯ ಒದಗಿಸಲು ಪ್ರಮುಖ
ಪಾತ್ರ, ಕ್ಷೇತ್ರದಲ್ಲಿ ರೋಗಗ್ರಸ್ಥವಾಗಿ ಮುಚ್ಚಲ್ಪಟ್ಟ
ಕಾರ್ಖಾನೆಗಳ ಪುನಾರಾರಂಭಕ್ಕೆ ಭಗೀರಥ
ಪ್ರಯತ್ನ, ಕ್ಷೇತ್ರದ ಪ್ರಮುಖ ಕಾರ್ಖಾನೆಗಳ
ನೌಕರರ ಭದ್ರತೆ, ವೇತನ ಹೆಚ್ಚಳ, ಕಾವೇರಿ
$\frac{3}{4}$ ನಾ/ಲೆಗಳ ಆಧುನೀಕರಣ ಕಾಮಗಾರಿಯ
ಕಾರ್ಯಗತಕ್ಕೆ ನೀಡಿದ ಶ್ರಮ, ಈ ಹಿಂದಿನ
ಹಲವಾರು ವರ್ಷಗಳಿಂದ ಪೂರ್ಣಗೊಳ್ಳದೇ
ನಿಂತಿರುವ ಇನ್ನೂ ಕ್ಷೇತ್ರದ ಅನೇಕ ಜ್ವಲಂತ
ಸಮಸ್ಯೆಗಳನ್ನು ನಿವಾರಿಸಲು ನನ್ನನ್ನು ಪುನಃ
ಮಂಡ್ಯX ಲೋಕಸಭಾ ಕ್ಷೇತ್ರದಿಂದ ಆರಿಸಿ 2
ತಮ್ಮ ಸೇವೆ ಮಾಡಲು ಅವಕಾಶ ನೀಡಬೇಕಾಗಿ
ವಿನಂತಿ.

**ಚುನಾವಣಾ ಪ್ರಣಾಳಿಕೆ ತಯಾರಿಸಿ.**

(ಅಂಕಗಳು : 20)

***ಪ್ರಶ್ನೆ ಮೂರು :*** ಕರ್ನಾಟಕ ರಾಜ್ಯ ರೇಷ್ಮೆ
ಸಹಕಾರ ಮಹಾಮಂಡಲಿಯ ವ್ಯವಸ್ಥಾಪಕ
ನಿರ್ದೇಶಕರು. ಜಿ/ಲ್ಲಾ ಪಂಚಾಯತ್ $\frac{1}{4}$
ವ್ಯಾಪ್ತಿಯಲ್ಲಿ ಕೆಲಸ ನಿರ್ವಹಿಸುವ ನೌಕರರಿಗೆ
ರೇಷ್ಮೇ ನೂಲಿನ ಉತ್ಪನ್ನಗಳನ್ನು ಸಾಲದ
ರೂಪದಲ್ಲಿ ನೀಡಲು ಒಪ್ಪಿ, ಅವರ
ಮೂಲವೇತನಕ್ಕನುಗುಣವಾಗಿ ಅವರ
ವೇತನದಲ್ಲಿ ಕಂತುಗಳ ರೂಪದಲ್ಲಿ/ $\frac{1}{2}$
ಕಟಾಯಿಸಿ ನೀಡುವ ಅವಕಾಶ ಕಲ್ಪಿಸಿರುತ್ತಾರೆ.
ಜಿಲ್ಲಾ ಪಂಚಾಯತ್ ವ್ಯಾಪ್ತಿಯಲ್ಲಿ ಕಾರ್ಯ
ನಿರ್ವಹಿಸುತ್ತಿರುವ ನೌಕರರೆಲ್ಲಾ ಈ
ಸದುಪಯೋಗ ಪಡೆಯಲು ಇಷ್ಟಪಟ್ಟು ಭರ್ತಿ
ಮಾಡಿದ ಅರ್ಜಿಯನ್ನು ಜಿಲ್ಲಾ ಪಂಚಾಯತ್
ಕಚೇರಿಗೆ/ ಸಲ್ಲಿಸುವುದು ನೀಡಲಾದ $\frac{3}{4}$

ಉತ್ಪನ್ನಗಳ ಮೌಲ್ಯವನ್ನು ನೌಕರರ ವೇತನದಲ್ಲಿ ಮೂವತ್ತು ಕಂತುಗಳಲ್ಲಿ ಕಟಾಯಿಸಿ ಮಹಾಮಂಡಳಿಗೆ ಸಲ್ಲಿಸಲಾಗುತ್ತದೆ.

**ಈ ಅಂಶಗಳಿಗೆ ಸುತ್ತೋಲೆಯನ್ನು ಸರ್ಕಾರದ**
3 **ಸಚಿವಾಲಯದ ಅಧೀXನ ಕಾರ್ಯದರ್ಶಿ ಎಲ್ಲಾ ಜಿಲ್ಲಾ ಪಂಚಾಯತಿಯ ಮುಖ್ಯಸ್ಥರಿಗೆ ಕಳುಹಿಸಿದಂತೆ ಹೊರಡಿಸಿ.**

(ಅಂಕಗಳು : 20)

**ಪ್ರಶ್ನೆ ನಾಲ್ಕು :** ಬೆಂಗಳೂರು ಅರಮನೆ ಅವರಣದಲ್ಲಿ ಎಪ್ಪತ್ತೆಂಟನೆ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಮೇ ಮೂರರಂದು.
$\frac{1}{4}$ ಜ್ಞಾನ/ಪೀಠ ಪ್ರಶಸ್ತಿ ಪುರಸ್ಕೃತ ಚಂದ್ರಶೇಕರ ಕಂಬಾರ ಅವರ ಅಧ್ಯಕ್ಷತೆ. ಕವಿಗಳು, ಸಾಹಿತಿಗಳು, ಕಲಾವಿದರು ರಾಷ್ಟ್ರದ ಐಕ್ಯತೆಯನ್ನು ಕಾಪಾಡಲು ತಮ್ಮ ಲೇಖನಿಯನ್ನು ಮುಡುಪಾಗಿಡಬೇಕೆಂದು ಕರೆ. ಗಡಿ ಪ್ರದೇಶಗಳ
$\frac{1}{2}$ ಶಾ/ಲೆಗಳ ಅಭಿವೃದ್ಧಿ, ಸಾಹಿತ್ಯ ಪ್ರಕಟಣೆಗಾಗಿ ಕನ್ನಡ ಸಾಹಿತ್ಯ ಪರಿಷತ್ತಿಗೆ ಆರ್ಥಿಕ ನೆರವು. ಇವುಗಳಿಗೆ ಒತ್ತಾಯ. ಸಮ್ಮೇಳನದ ಉದ್ಘಾಟಕರಾದ ಮುಖ್ಯಮಂತ್ರಿ ಶ್ರೀ ಹೆಚ್.ಡಿ.
$\frac{3}{4}$ ಕುಮಾರಸ್ವಾಮಿ ರಾಜ್ಯದ ಹೊರಗಿರುವ ಕನ್ನಡ/ ಪ್ರದೇಶಗಳನ್ನು ಪಡೆಯಲು ಭರವಸೆ. ಯುವಜನ ಖಾತೆ ಸಚಿವರಿಂದ ಚಿತ್ರಕಲಾ ಪ್ರದರ್ಶನ ಉದ್ಘಾಟನೆ. ನಾಡಗೀತೆಯೊಂದಿಗೆ ಸಮ್ಮೇಳನ ಪ್ರಾರಂಭ.

**ಪತ್ರಿXಕಾ ವರದಿ ತಯಾರಿಸಿ.** 4

(ಅಂಕಗಳು : 20)

**ಪ್ರಶ್ನೆ ಐದು :** ಕೆನರಾ ಬ್ಯಾಂಕು, ನಮ್ಮ ರಾಜ್ಯದ ರೈತರ ಕೃಷಿ ಅಭಿವೃದ್ಧಿಗೆ ಬೃಹತ್ ಕೊಡುಗೆ ನೀಡಿದೆ. ಸುಮಾರು ಮೂವತ್ತು ಲಕ್ಷ ರೈತ ಕುಟುಂಬಗಳಿಗೆ ಕೊಟ್ಟಿರುವ ಸಾಲ ಐವತ್ತು ಸಾವಿರ ಕೋಟಿ ರೂಪಾಯಿ/ಗಳಿಗೆ $\frac{1}{4}$
ಸಮೀಪಿಸುತ್ತಿದೆ. ಇಷ್ಟು ದೊಡ್ಡ ಪ್ರಮಾಣದಲ್ಲಿ ರೈತರಿಗೆ ಹಣ ಒದಗಿಸುವ ಬೇರೆ ವ್ಯವಸ್ಥೆ ಇಲ್ಲ. ಈ ವ್ಯವಸ್ಥೆ ಮುಂದಿನ ಸಾಲಿಗೆ ಸುಗಮವಾಗಬೇಕಾದರೆ ಸುಮಾರು ನಲವತ್ತು ಸಾವಿರ ಕೋಟಿ ರೂಪಾಯಿಗಳ ಸಾಲದ/ $\frac{1}{2}$
ಕಂತು ಮರು ಪಾವತಿ ಆಗಬೇಕಾಗಿದೆ. ಈವರೆಗೆ ಮರುಪಾವತಿ ಕಡಿಮೆಯಾಗಿದೆ. ಮರುಪಾವತಿ ಅದಲ್ಲಿ ಮಾತ್ರ ಈ ಸಾಲಿನಲ್ಲಿ ಹತ್ತು ಸಾವಿರ ಕೋಟಿ ರೂಪಾಯಿ ಸಾಲ ನೀಡಿಕೆ ಸಾಧ್ಯ ಇಲ್ಲದೇ ಹೋದಲ್ಲಿ ನೀಡಿಕೆ ಕುಸಿದು ಗ್ರಾ/ಮೀಣ ಜನ ಸಾಲ ಸಿಗದೆ $\frac{3}{4}$
ತೊಂದರೆಗೊಳಗಾಗಿ ತಮ್ಮ ಆದಾಯ ಹೆಚ್ಚಿಸುವ, ಆಸ್ತಿ ಅಭಿವೃದ್ಧಿ ಸುಧಾರಣೆ ಕೈಗೊಳ್ಳಲು ಸಾಧ್ಯವಾಗುವುದಿಲ್ಲ. ಸಾಲ ಮರುಪಾವತಿ ಬಗ್ಗೆ ಮುಖ್ಯಮಂತ್ರಿಗಳ ಹೆಸರಿನಲ್ಲಿ
**ಮನವಿ ಪತ್ರ ತಯಾರಿಸಿ.**X (ಅಂಕಗಳು : 20) 5